<u>ಹಿರಿಯ ವ್ಯವಹಾರ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ ರವರ ನ್ಯಾಯಾಲಯ, ಹೊಸನಗರ .</u>

| | | | |
|---|---|---|---|
| ಸಾಕ್ಷಿದಾರರ ಹೆಸರು | : | ಶಿವಾನಂದ ಕೋಳಿ | ಪಿ.ಡಬ್ಲ್ಯೂ- **1** |
| ತಂದೆಯ ಹೆಸರು | ಃ | ಯಲ್ಲಪ್ಪ | ಸಿ.ಡಬ್ಲ್ಯೂ- **1** |
| ವಯಸ್ಸು | ಃ | **31** ವರ್ಷ | ಪ್ರಾಮಾಣೀಕರಿಸಿದ |
| ಉದ್ಯೋಗ | ಃ | ಪಿ.ಎಸ್.ಐ., ನಗರ ಪೋಲೀಸ್ ಠಾಣೆ | ದಿಃ **08/05/2025** |
| ವಾಸ | ಃ | ನಗರ. | |

<u>ಮುಖ್ಯ ವಿಚಾರಣೆಃ- ಮಾನ್ಯ ಸ.ಸ.ಅ. ರವರಿಂದಃ-</u>

ನಾನು ದಿನಾಂಕ **31-06-2021** ರಿಂದ **14-06-2023** ರ ವರೆಗೆ ಪಿ.ಎಸ್.ಐ. ಆಗಿ ರಿಪ್ಪನ್‌ಪೇಟೆ ಪೋಲೀಸ್ ಠಾಣೆಯಲ್ಲಿ ಕರ್ತವ್ಯ ನಿರ್ವಹಿಸಿರುತ್ತೇನೆ.

ದಿನಾಂಕ **08-11-2022** ರಂದು ಬೆಳಿಗ್ಗೆ **10-00** ಗಂಟೆಯಿಂದ ನಾನು ಮತ್ತು ಚಾ.ಸಾ.**-2** ಗಸ್ತಿನಲ್ಲಿದ್ದಾಗ ಬೆಳಗ್ಗೆ **10-30** ರ ಸಮಯದಲ್ಲಿ ಬೆಳವಳ್ಳಿ ಗ್ರಾಮದಲ್ಲಿ ಸಿದ್ದಪ್ಪನ ಗುಡಿ ಬಸ್ಸ್ ನಿಲ್ದಾಣದ ಹತ್ತಿರ ಒಬ್ಬ ಯುವಕನು ಅಸಭ್ಯವಾಗಿ ವರ್ತಿಸುತ್ತಿದ್ದನ್ನು ದೂರಿನಿಂದ ನೋಡಲಾಗಿ ಅವನ ಬಳಿ ಹೋಗಿ ವಿಚಾರಿಸಲಾಗಿ ತನ್ನ ಹೆಸರು ಸಿದ್ದೇಶ್ ತಂದೆ ಗಣಪತಿ, ವಯಸ್ಸು **23** ವರ್ಷ, ಭಂಡಾರಿ ಜನಾಂಗ, ಡ್ರೈವಿಂಗ್ ಕೆಲಸ, ವಾಸ ನಡುವಳ್ಳಿ ಗ್ರಾಮ ಎಂದು ತಿಳಿಸಿರುತ್ತಾರೆ. ಸದರಿ ವ್ಯಕ್ತಿಯ ಬಾಯಿಯಿಂದ ಅವಲು ಪದಾರ್ಥದ ವಾಸನೆ ಬರುತ್ತಿತ್ತು ಮತ್ತು ಆತನು ಮಾತನಾಡುವಾಗ ತೊದಲುತಿದ್ದನು. ಈ ಬಗ್ಗೆ ವಿಚಾರಿಸಲಾಗಿ ಬೀಡಿಯಲ್ಲಿ ಗಾಂಜಾ ಸೇವನೆಯನ್ನು ಮಾಡಿದನ್ನು ಒಪ್ಪಿಕೊಂಡಿದ್ದು ಬೀಡಿ ಎಲ್ಲಿ ಎಂದು ಕೇಳಲಾಗಿ ಅದನ್ನು ಚರಂಡಿಗೆ ಎಸೆದಿರುವುದಾಗಿ ತಿಳಿಸಿರುತ್ತಾರೆ. ಸದರಿ ಬೀಡಿಯನ್ನು

ಹುಡುಕಿದ್ದು ಸಿಕ್ಕಿರುವುದಿಲ್ಲ. ನಂತರ ಬೆಳಿಗ್ಗೆ 10-45 ರ ಸಮಯದಲ್ಲಿ ಆಸಾಮಿಯನ್ನು ವಶಕ್ಕೆ ಪಡೆದುಕೊಂಡು ನಂತರ ಬೆಳಿಗ್ಗೆ 11-00 ಗಂಟೆಗೆ ಅಮಲು ಪದಾರ್ಥ ಸೇವನೆ ಮಾಡಿದನ್ನು ಖಚಿತಪಡಿಸಿಕೊಳ್ಳಲು ಚಾ.ಸಾ.-5 ರವರಿಗೆ ಮನವಿ ಪತ್ರ ನೀಡಿರುತ್ತೇನೆ. ನಂತರ ಚಾ.ಸಾ.-6 ಮತ್ತು 7 ರವರು ಸದರಿ ಆಸಾಮಿಯನ್ನು ಶಿವಮೊಗ್ಗ ಮೆಗ್ಗಾನ್ ಆಸ್ಪತ್ರೆಗೆ ತಪಾಸಣೆಗೆ ಕರೆದುಕೊಂಡು ಹೋಗಿರುತ್ತಾರೆ. ನಂತರ ಅದೇ ದಿನ ವೈದ್ಯಕೀಯ ಪರೀಕ್ಷೆ ಮುಗಿಸಿಕೊಂಡು ಮಾದಕ ಸೇವನೆ ಮಾಡಿರುವುದು ದೃಢಪಟ್ಟ ಹಿನ್ನೆಲೆಯಲ್ಲಿ ಚಾ.ಸಾ.-6 ಮತ್ತು 7 ರವರು ಆಸಾಮಿಯನ್ನು ಅದೇ ದಿನ ಮಧ್ಯಾಹ್ನ 03-30 ಕ್ಕೆ ಠಾಣೆಗೆ ವಾಪಾಸು ಕರೆದುಕೊಂಡು ಬಂದಿದ್ದು ನಂತರ ವೈದ್ಯಕೀಯ ವರದಿಯನ್ನು ನೋಡಿ ಪರಿಶೀಲಿಸಿ ಚಾ.ಸಾ.-9 ರವರ ಮುಂದೆ ಮುಂದಿನ ಕ್ರಮಕ್ಕಾಗಿ ವರದಿ ನೀಡಿರುತ್ತಾರೆ. ಸಾಕ್ಷಿಯು ಸದರಿ ವರದಿಯನ್ನು ನೋಡಿ ತನ್ನ ಸಹಿಯನ್ನು ಗುರುತಿಸಿದ್ದು ಅದನ್ನು ನಿ.ಪಿ.-1 ಎಂದು ಸಾಕ್ಷಿಯ ಸಹಿಯನ್ನು ನಿ.ಪಿ.-1(ಎ) ಎಂದು ಗುರುತಿಸಲಾಯಿತು.

ನಂತರ ಅದೇ ದಿನ ಸ್ಥಳಕ್ಕೆ ಭೇಟಿ ಕೊಟ್ಟು ಚಾ.ಸಾ.-2 ರವರು ತೋರಿಸಿದ ಘಟನಾ ಸ್ಥಳದಲ್ಲಿ ಪಂಚರಾದ ಚಾ.ಸಾ.-3 ಮತ್ತು 4 ರವರ ಸಮಕ್ಷಮ ಸಂಜೆ 04-00 ಗಂಟೆಯಿಂದ 05-00 ಗಂಟೆಯವರೆಗೆ ಮಹಜರ್ ಕ್ರಮ ಜರುಗಿಸಿ ಕಚ್ಚಾ ನಕ್ಷೆ ತಯಾರಿಸಿರುತ್ತೇನೆ. ಸಾಕ್ಷಿಯು ಮಹಜರ್ ಮತ್ತು ಕಚ್ಚಾ ನಕಾಶೆಯನ್ನು ನೋಡಿ ತನ್ನ ಸಹಿಗಳನ್ನು ಗುರುತಿಸಿದ್ದು ಮಹಜರ್ ಮತ್ತು ಕಚ್ಚಾ ನಕಾಶೆಯನ್ನು ನಿ.ಪಿ.-2 ಮತ್ತು 3 ಎಂದು ಹಾಗೂ ಸಾಕ್ಷಿಯ

ಸಹಿಗಳನ್ನು ನಿ.ಪಿ.-2(ಎ) ಮತ್ತು ನಿ.ಪಿ.-3(ಎ) ಎಂದು ಗುರುತಿಸಲಾಯಿತು. ಸಾಕ್ಷಿಯು ನ್ಯಾಯಾಲಯದ ಮುಂದಿರುವ ಆರೋಪಿಯನ್ನು ನೋಡಿ ಗುರುತಿಸಿರುತ್ತಾರೆ.

ಪಾಟೀ ಸವಾಲು:- ಆರೋಪಿ ಪರ ಶ್ರೀ ವಿ.ಎಸ್.ಕೆ. ವಕೀಲರಿಂದ.

ಆ ದಿನ ನಾನು ಕೆಂಚನಾಳ ಗ್ರಾಮದಿಂದ ಎಷ್ಟು ಗಂಟೆಗೆ ಹೊರಟಿದ್ದೆ ಎಂದರೆ? ಸಾಕ್ಷಿಯು ಬೆಳಿಗ್ಗೆ 10-15 ಕ್ಕೆ ಎಂದು ಹೇಳುತ್ತಾರೆ. ಆ ದಿವಸ ನಮ್ಮ ಇಲಾಖಾ ವಾಹನವನ್ನು ಮಧುಸೂಧನ್ ರವರು ಚಲಾಯಿಸುತ್ತಿದ್ದರು. ಆ ದಿವಸ ಆರೋಪಿಯನ್ನು ನೋಡಿ ವಾಹನ ನಿಲ್ಲಿಸಲು ಮಧುಸೂಧನ್ ರವರಿಗೆ ನಾನೇ ಹೇಳಿರುತ್ತೇನೆ. ಆರೋಪಿಯಿಂದ ಸುಮಾರು 50 ಅಡಿ ದೂರದಲ್ಲಿ ವಾಹನ ನಿಲ್ಲಿಸಿರುತ್ತೇನೆ. ನಾವು ಆರೋಪಿಯನ್ನು ನೋಡಿದಾಗ ಆತನ ಬಳಿ ಬೀಡಿ ಅಥವಾ ಸಿಗರೇಟ್ ಯಾವುದು ಇರಲಿಲ್ಲ ಎಂದರೆ? ಸಾಕ್ಷಿಯು ಆತ ಬೀಡಿ ಸೇದಿ ಎಸೆದಿದ್ದ ಎಂದು ಹೇಳುತ್ತಾರೆ.

ಆರೋಪಿಯನ್ನು ಮೊದಲ ಬಾರಿಗೆ ನೋಡಿದ ಕೊಡಲೇ ಅಂಗಶೋಧನೆ ಮಾಡಿರುವುದಿಲ್ಲ. ಆರೋಪಿಯ ಜೇಬಿನಲ್ಲಿ ಬೆಂಕಿಪಟ್ಟಣ ಅಥವಾ ಸಿಗರ್ ಲೈಟ್ ಇದ್ದ ಬಗ್ಗೆ ಪರಿಶೀಲನೆ ಮಾಡಿರುವುದಿಲ್ಲ. ಬೀಡಿಯನ್ನು ಹುಡುಕುವ ಪ್ರಯತ್ನ ಮಾಡಿದ್ದೀರಾ ಎಂದರೆ? ಸಾಕ್ಷಿಯು ಹುಡುಕಿದ್ದು ಸಿಕ್ಕಿರುವುದಿಲ್ಲ ಎಂದು ಹೇಳುತ್ತಾರೆ.

ಸ್ಥಳದಿಂದ ಆರೋಪಿಯನ್ನು ಠಾಣೆಗೆ ಕರೆದುಕೊಂಡು ಬಂದು ಮನವಿ ಪತ್ರದೊಂದಿಗೆ ಶಿವಮೊಗ್ಗ ಮೆಗ್ಗಾನ್ ಆಸ್ಪತ್ರೆಗೆ ಕಳುಹಿಸಿಕೊಟ್ಟಿರುತ್ತೇನೆ. ಆರೋಪಿಯನ್ನು ರಿಪ್ಪನ್ ಪೇಟೆ ಆಸ್ಪತ್ರೆಯಲ್ಲಿ ತಪಾಸಣೆಗೆ ಒಳಪಡಿಸಿದ್ದೀರಾ ಎಂದರೆ? ಸಾಕ್ಷಿಯು ಅಲ್ಲಿ

ಸಂಬಂಧಪಟ್ಟ ಕಿಟ್ ಇಲ್ಲಾ ಎಂದು ಹೇಳುತ್ತಾರೆ. ಆರೋಪಿಯು ಮದ್ಯಪಾನ ಮಾಡಿರುವ ಬಗ್ಗೆ ವಿಚಾರಣೆ ಮಾಡಿರುವುದಿಲ್ಲ. ಆ ಸಂದರ್ಭದಲ್ಲಿ ಆರೋಪಿಯ ಜೊತೆಗೆ ಯಾರೂ ಇರಲಿಲ್ಲ.

ಮಹಜರ್ ಗೆ ಸ್ಥಳೀಕರನ್ನು ಪಂಚರನ್ನಾಗಿ ಮಾಡಿದ್ದೀರಾ ಎಂದರೆ? ಸಾಕ್ಷಿಯು ಸ್ಥಳೀಕರು ಯಾರು ಲಭ್ಯ ಇರಲಿಲ್ಲ ಎಂದು ಹೇಳುತ್ತಾರೆ. ಮಹಜರ್ ಅನ್ನು ಠಾಣೆಯಲ್ಲಿ ಬರೆದು ತಯಾರಿಸಿರುತ್ತೇನೆ ಎಂದರೆ ಸರಿಯಲ್ಲ. ಮಹಜರ್ ಕಾಲಕ್ಕೆ ಚಾ.ಸಾ.-3 ಮತ್ತು 4 ಖುದ್ದು ಹಾಜರಿರಲಿಲ್ಲ ಎಂದರೆ ಸರಿಯಲ್ಲ. ನಕ್ಷೆಯನ್ನು ಸ್ಥಳದಲ್ಲಿ ತಯಾರಿಸಿರುವುದಿಲ್ಲ ಎಂದರೆ ಸರಿಯಲ್ಲ. ಆರೋಪಿಯು ಬೀಡಿಯಲ್ಲಿ ಅಮಲು ಪದಾರ್ಥ ಸೇರಿಸಿ ಸೇದಿರುವುದು ಸುಳ್ಳು ಮತ್ತು ನಮ್ಮ ಮೇಲಾಧಿಕಾರಿಗಳ ಮಾತು ಕೇಳಿ ಈ ರೀತಿ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಆ ದಿನ ಆರೋಪಿಯನ್ನು ಸ್ಥಳದಿಂದ ಠಾಣೆಗೆ ಕರೆದುಕೊಂಡು ಬಂದು ವೈದ್ಯಕೀಯ ಪರೀಕ್ಷೆಗೆ ಶಿವಮೊಗ್ಗದ ಮೆಗ್ಗಾನ್ ಆಸ್ಪತ್ರೆಗೆ ಕಳುಹಿಸಿಕೊಟ್ಟಿರುವುದು ಸುಳ್ಳು ಎಂದರೆ ಸರಿಯಲ್ಲ. ಈ ಪ್ರಕರಣಕ್ಕೂ ಮತ್ತು ಆರೋಪಿಗೂ ಸಂಬಂಧ ಇಲ್ಲ ಎಂದರೆ ಸರಿಯಲ್ಲ.

ಮರು ವಿಚಾರಣೆ:- ಇಲ್ಲ.

**(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದ ಮೇರೆಗೆ ಬೆರಳಚ್ಚು ಮಾಡಿಸಲಾಯಿತು.)**
**(ಓದಿ ಹೇಳಿ ಕೇಳಿ ಸರಿ ಇದೆ ಎಂದು ಒಪ್ಪಿರುತ್ತಾರೆ.)**

ಹಿರಿಯ ವ್ಯವಹಾರ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ.,
ಹೊಸನಗರ .